ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./72/2014-15 ದಿನಾಂಕ: 15/07/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1) ಗಿಡ್ಡ ಹುಚ್ಚಪ್ಪ ತಂದೆ ತಂದೆ ಈರಪ್ಪ ಉಳೂರು ಗ್ರಾಮ ಸಿರುಗುಪ್ಪ ತಾಲೂಕು | 1)ಶ್ರೀ ಹುಚ್ಚ ರಂಗಪ್ಪ ತಂದೆ ಮಲ್ಲೇಶಪ್ಪ ಉಳೂರು ಗ್ರಾಮ ಸಿರುಗುಪ್ಪ ತಾಲೂಕು<br>2) ರಂಗಪ್ಪ ನಾಗಪ್ಪ ಉಳೂರು ಗ್ರಾಮ ಸಿರುಗುಪ್ಪ ತಾಲೂಕು<br>3) ಹೆಚ್ ಹುಲುಗಪ್ಪ ತಂದೆ ದಿವಂಗತ ನಾಗಪ್ಪ ಉಳೂರು ಗ್ರಾಮ ಸಿರುಗುಪ್ಪ ತಾಲೂಕ |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ | ಪಹಿವಾಟು ಸಂಖ್ಯೆ |
|---|---|---|---|---|
| ಉಳೂರು ಗ್ರಾಮ | 206/ಬಿ | 0.50 | ಹೆಚ್ 26/2014-15 | 59/2014-15 |

ಪೀಠಿಕೆ:

ಸಿರುಗುಪ್ಪ ತಾಲೂಕಿನ ಉಳೂರು ಗ್ರಾಮದ ಸರ್ವೆ ನಂ: 206/ಬಿ ವಿಸ್ತೀರ್ಣ:0.50 ಸೆಂಟ್ಸ್ ಜಮೀನುಗೆ ಸಂಬಂಧಿಸಿದಂತೆ ಪೋತಿ ಪಟ್ಟಿ ಪ್ರಕಾರ ಗಿಡ್ಡ ಹುಚ್ಚಪ್ಪ ತಂದೆ ಈರಪ್ಪ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ 1) ಹುಚ್ಚ ರಂಗಪ್ಪ ತಂದೆ ಮಲ್ಲೇಶಪ್ಪ ಉಳೂರು ಗ್ರಾಮ ಇವರು ದಿನಾಂಕ 24-12-2014 ರಂದು ಹಾಗೂ ರಂಗಪ್ಪ ತಂದೆ ದಿವಂಗತ ನಾಗಪ್ಪ ಇವರು ದಿನಾಂಕ 02-01-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 25-04-2015, 13-07-2015, 18-02-2015, 22-01-2016, 29-01-2016, 18-03-2016, 02-04-2016, 15-04-2016, 20-05-2016, 24-06-2016, 22-07-2016, ಮತ್ತು 01-07-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಬಂಧಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು:

ವಾದಿಗಳಾದ ಶ್ರೀ ಗಿಡ್ಡ ಹುಚ್ಚಪ್ಪ ತಂದೆ ದಿವಂಗತ ಈರಪ್ಪ ಉಳೂರು ಗ್ರಾಮ ಇವರು ಸರ್ವೆ ನಂಬರ್ 206/ಬಿ ವಿಸ್ತೀರ್ಣ 0.50 ಸೆಂಟ್ಸ್ ಜಮೀನು ತಿಪ್ಪಾಗ ತಂದೆ ಪೋತಗ ಎಂಬ ಹೆಸರಿಗೆ ಪಟ್ಟಿ, ಇದ್ದು ಸದರಿ ಆಸ್ತಿ ನಮ್ಮ ಪೂರ್ವಿಕರಾಗಿದ್ದಾಗಿರುತ್ತದೆಂಬ ತಪ್ಪು ಮಾಹಿತಿಯಿಂದ ಪೋತಿ ಆಧಾರದ ಮೇರೆಗೆ ಮುಟೇಷನ್ ಮಾಡುವಂತೆ ಹಕ್ಕು ಬದಲಾವಣೆ ಮಾಡುವ ಸಂಧರ್ಭದಲ್ಲಿ ಹುಚ್ಚ ರಂಗಪ್ಪ ತಂದೆ ಮಲ್ಲೇಶಪ್ಪ ಇವರು ಆಧಾರ ರಹಿತವಾಗಿ ಆಕ್ಷೇಪಣೆಸಲ್ಲಿಸಿದ್ದರಿಂದ ವಿವಾದ ಏರ್ಪಟ್ಟು ವಿಚಾರಣೆ ನಡೆಯುತಿದ್ದು ಈಗ ಗ್ರಾಮದ ಹಿರಿಯರಲ್ಲಿ ಪರಸ್ಪರರು ಪಂಚಾಯಿತಿ ನಿರ್ವಹಿಸಿದ್ದು ಸದ್ರಿ ಆಸ್ತಿ

ಎಂದು ಅಧಿಕೃತ ದಾಖಲೆಗಳ ಪ್ರಕಾರ ತಿಳಿದು ಬಂದಿರುತ್ತದೆ ಆದ್ದರಿಂದ ಈ ಬಗ್ಗೆ ನಾನು ಸದ್ರಿ ಜಮೀನಿನ ಪಟ್ಟ ವರ್ಗಾವಣೆಗಾಗಿ ಸಲ್ಲಿಸಿದ ಮನವಿಯನ್ನು ಯಾರ ಒತ್ತಾಯವಿಲ್ಲದೆ ಸಮಚಿತ್ತನಾಗಿ ಸ್ವಯಂ ಪ್ರೇರಣೆಯಿಂದ ಹಿಂಪಡೆದಿರುತ್ತೇನೆ ಕಾನೂನು ರೀತ್ಯ ನಿಜವಾದವಾರಸುದಾರರಾದ ಹುಲುಗಪ್ಪ ತಂದೆ ದಿವಂಗತ ನಾಗಪ್ಪ ಇವರ ಹೆಸರಿಗೆ ವರ್ಗಾವಣೆ ಮಾಡಲು ನನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿರುತ್ತಾರೆ.

<u>ಪ್ರತಿವಾದಿಗಳು</u>

1)ಪ್ರತಿವಾದಿಗಳಾದ ಹುಚ್ಚ ರಂಗಪ್ಪ ಉಳೂರು ಇವರು ಉಳೂರು ಗ್ರಾಮದ ಸರ್ವೆ ನಂಬರ್ 206/ಬಿ ವಿಸ್ತೀರ್ಣ 0.50 ಸೆಂಟ್ಸ್ ಜಮೀನು ತಿಪ್ಪಾಗ ತಂದೆ ಪೋತಗ ಇಂದ ಗಿಡ್ಡ ಹುಚ್ಚಪ್ಪ ತಂದೆ ದಿವಂಗತ ಈರಪ್ಪ ಇವರ ಹೆಸರಿಗೆ ಪೋತಿ ಪಟ್ಟ ವರ್ಗಾವಣೆ ಸಂಧರ್ಭದಲ್ಲಿ ದಿನಾಂಕ 24-12-2014ರಂದು ತಕರಾರು ಅರ್ಜಿಸಲ್ಲಿಸಿದ್ದು ಸದ್ರಿ ಪ್ರಕರಣದ ವಿಚಾರಣೆಗಳಿಗೆ ಹಾಜರಾಗಿ ಯಾವುದೇ ಲಿಖಿತ ಹೇಳಿಕೆ ನೀಡಲು ತಿಳಿಸಿದಾಗ್ಯೂ ಯಾವುದೇ ದಾಖಲೆಗಳು ಸಲ್ಲಿಸಿರುವುದಿಲ್ಲ ಹುಚ್ಚರಂಗಪ್ಪ ತಂದೆ ಮಲ್ಲೇಶಪ್ಪ ಇವರ ಜಮೀನು ಬೇರೆ ಇರುತ್ತದೆ ಎಂದು ಊರಿನ ತಳವಾರ ಸದ್ರಿ ವಿಚಾರಣೆ ಸಮಯದಲ್ಲಿ ಮೌಖಿಕವಾಗಿ ಹೇಳಿಕೆ ನೀಡಿರುತ್ತಾರೆ

2) ಪ್ರತಿವಾದಿಗಳಾದ ಹುಲುಗಪ್ಪ ತಂದೆ ದಿವಂಗತ ಉಳೂರು ಗ್ರಾಮ ಇವರು ಉಳೂರು ಗ್ರಾಮದ ಸರ್ವೆ ನಂಬರ್ 2016/ಬಿ ವಿಸ್ತೀರ್ಣ 0.50 ಸೆಂಟ್ಸ್ ಜಮೀನು ತಿಪ್ಪಾಗ ತಂದೆ ಪೋತಗ ಇಂದ ಗಿಡ್ಡ ಹುಚ್ಚಪ್ಪ ತಂದೆ ದಿವಂಗತ ಈರಪ್ಪ ಉಳೂರು ಗ್ರಾಮ ಇವರ ಹೆಸರಿಗೆ ಪೋತಿ ಪಟ್ಟ ವರ್ಗಾವಣೆ ಸಂಧರ್ಭದಲ್ಲಿ ದಿನಾಂಕ 02-01-2015ರಂದು ತಕರಾರು ಸಲ್ಲಿಸಿದ್ದು ಈಗ ಗ್ರಾಮದ ಹಿರಿಯರಲ್ಲಿ ಪರಸ್ಪರರು ಪಂಚಾಯತಿ ನಿರ್ವಹಿಸಿದ ನಂತರ ಸದರಿ ಆಸ್ತಿ ತಿಪ್ಪಾಗ ತಂದೆ ಪೋತಗ ಇವರ ನಿಜವಾದ ಮರಿಮೊಮ್ಮಗನಾದ ಹುಲುಗಪ್ಪ ತಂದೆ ದಿವಂಗತ ನಾಗಪ್ಪ ನನಗೆ ಸಂಬಂಧಿಸಿದೆಂದು ನನ್ನ ಹೆಸರಿಗನಲ್ಲಿ ಪಟ್ಟ ವರ್ಗಾವಣೆ ಹೊಂದಲು ವಾದಿಯಾದ ಗಿಡ್ಡ ಹುಚ್ಚಪ್ಪ ತಂದೆ ಈರಪ್ಪ ಹಾಗೂ ಪ್ರತಿವಾದಿಗಳಾದ ಹುಚ್ಚರಂಗಪ್ಪ ತಂದೆ ಮಲ್ಲೇಶಪ್ಪ ಇವರು ಸಹ ತಮ್ಮ ಸ್ವ ಇಚ್ಛೆಯಿಂದ ಒಪ್ಪಿರುತ್ತಾರೆಂದು ನಿಜವಾದ ವಾರಸುದಾನಾದ ಹುಲುಗಪ್ಪ ತಂದೆ ದಿವಂಗತ ನಾಗಪ್ಪ ಎಂಬ ಹೆಸರಿಗೆ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಹಾಗೂ ದಿನಾಂಕ 23-11-2015 ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ

1) ಗಿಡ್ಡ ಹುಚ್ಚಪ್ಪ ತಂದೆ ಈರಪ್ಪ ಉಳೂರು ಗ್ರಾಮ ಇವರು ಸದ್ರಿ ಜಮೀನಿಗೆ ವಾರಸುದಾರರು ಆಗಿರುವುದಿಲ್ಲ ಇವರ ಅರ್ಜಿಯನ್ನು ರದ್ದು ಪಡಿಸಬೇಕು.

2)ಹುಚ್ಚರಂಗಪ್ಪ ತಂದೆ ಮಲ್ಲೇಶಪ್ಪ ಉಳೂರು ಗ್ರಾಮ ಇವರು ಸಹ ಸದ್ರಿ ಜಮೀನಿಗೆ ವಾರಸುದಾರರು ಆಗಿರುವುದಿಲ್ಲ ಇವರ ಅರ್ಜಿಯನ್ನು ರದ್ದು ಮಾಡಬೇಕು.

3) ರಂಗಪ್ಪ ತಂದೆ ದಿವಂಗತ ಉಳೂರು ಇವರು ವಾರಸುದಾರನ್ನು ಆಗಿರುತ್ತೇನೆ ಇತನು ನನಗೆ ಅಂದರೆ ಹುಲುಗಪ್ಪ ತಂದೆ ದಿವಂಗತ ನಾಗಪ್ಪನಿಗೆ ಹಕ್ಕು ಬದಲಾವಣೆ ಮಾಡಿಕೊಡುವುದಕ್ಕೆ ಒಪ್ಪಿ ಒಪ್ಪಿಗೆ ಪತ್ರದಲ್ಲಿ ಸಹಿ ಮಾಡಿಕೊಟ್ಟಿರುತ್ತಾನೆ ಕಾರಣ ನನ್ನ ಹೆಸರಿಗೆ ಹಕ್ಕುಬದಲಾವಣೆ ಮಾಡಬೇಕು

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಮೂಲ ವಾರಸುದಾರರು ಯಾರು ಎಂಬುವುದು ತಿಳಿಯದ ಕಾರಣ ಸದ್ರಿ ಜಮೀನು ಯಾಥ ಸ್ಥಿತಿಯಲ್ಲಿನ ಹೆಸರುನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ.

-::ಆದೇಶ::-

ಮೇಲಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉಳೂರು ಗ್ರಾಮದ ಸರ್ವೇ ನಂಬರ್. 206/ಬಿ ವಿಸ್ತೀರ್ಣ 0.50 ಸೆಂಟ್ಸ್ ಜಮೀನು ಪಹಣಿ ಪತ್ರಿಕೆಯಲ್ಲಿ ಈ ಹಿಂದೆ ಇದ್ದಂತೆ ತಿಪ್ಪಗ ತಂದೆ ಪೋತಗ ಎಂದು ಯಾಥ ಸ್ಥಿತಿಯ ಹೆಸರಿನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ: 15-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,

ಇದರ ಪ್ರತಿಯನ್ನು:
1.ವಾದಿ ಹಾಗೂ ಪ್ರತಿವಾದಿಗಳು.
2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ.